# ‘ಕನಕವತಿ’ಯ ಮನದಾಳ



ಕನ್ನಡದೊಂದಿಗೆ ತಮಿಳು ಸಿನಿಮಾರಂಗದಲ್ಲಿಯೂ ಛಾಪು ಮೂಡಿಸುತ್ತಿರುವ ನಟಿ ರುಕ್ಮಿಣಿ ವಸಂತ್, ಸದ್ಯ ‘ಕಾಂತಾರ ಒಂದು ದಂತಕಥೆ ಅಧ್ಯಾಯ 1’ ಚಿತ್ರತಂಡ ಸೇರಿರುವುದು ಸಿನಿಮಾ ಬಗ್ಗೆ ಪ್ರೇಕ್ಷಕರಲ್ಲಿ ಇನ್ನಷ್ಟು ನಿರೀಕ್ಷೆ ಹೆಚ್ಚಿಸಿದೆ.

2022ರಲ್ಲಿ ತೆರೆಕಂಡಿದ್ದ, ನಟ ರಿಷಬ್ ಶೆಟ್ಟಿ ನಟಿಸಿ, ನಿರ್ದೇಶಿಸಿದ್ದ ‘ಕಾಂತಾರ’ ಸಿನಿಮಾ ಪ್ರೇಕ್ಷಕರ ಮೆಚ್ಚುಗೆ ಗಳಿಸಿ ದೊಡ್ಡ ಮಟ್ಟದಲ್ಲಿ ಯಶಸ್ಸು ಪಡೆದುಕೊಂಡಿತ್ತು. ಈ ಗೆಲುವು, ‘ಕಾಂತಾರ’ ಪ್ರೀಕ್ವೆಲ್ ಬಗ್ಗೆ ಅಪಾರ ನಿರೀಕ್ಷೆ ಹುಟ್ಟುಹಾಕಿರುವುದಲ್ಲದೆ, ಸಿನಿಮಾದಲ್ಲಿ ರುಕ್ಮಿಣಿ ಕನಕವತಿಯಾಗಿ ಬಣ್ಣ ಹಚ್ಚಿರುವುದು ಇನ್ನಷ್ಟು ಹುರುಪು ತುಂಬಿದೆ.

ಈ ಸಂದರ್ಭದಲ್ಲಿ ಕಾಂತಾರ ಪ್ರೀಕ್ವೆಲ್ ಅವಕಾಶ ತಮಗೆ ಒದಗಿದ ಸಂದರ್ಭವನ್ನು ರುಕ್ಮಿಣಿ ವಸಂತ್ ಮೆಲುಕು ಹಾಕಿದ್ದಾರೆ.

‘ಕಳೆದ ವರ್ಷ ಈ ಸಿನಿಮಾ ಸಂಬಂಧ ರಿಷಬ್ ಶೆಟ್ಟಿ ಅವರನ್ನು ಭೇಟಿ ಮಾಡಿದ್ದೆ. ಆಗ ಅವರು ಸಿನಿಮಾ ಕಥೆ ಹೇಳಿ ಪ್ರಾಜೆಕ್ಟ್‌ನಲ್ಲಿ ನಾನು ಭಾಗಿಯಾಗಲು ಸಾಧ್ಯವೇ ಎಂದು ಕೇಳಿದರು. ಆ ಸಂದರ್ಭ, ನಿಜವಾಗಿಯೂ ಕನಸೊಂದು ನನಸಾದಂತೆ ಅನಿಸಿತು. ಈ ಸಿನಿಮಾದಲ್ಲಿ ನನ್ನ ಪಾತ್ರ ಖಚಿತವಾದ ನಂತರ ನನಗೆ ಎಷ್ಟು ಸಂತೋಷವಾಗಿತ್ತೆಂದರೆ, ಜೋರಾಗಿ ಕೂಗುವಷ್ಟು’ ಎಂದಿದ್ದಾರೆ.

‘‘ನಾನು ಎಲ್ಲಿಗೇ ಹೋದರೂ, ಜನರು ನಿಮ್ಮ ಮುಂದಿನ ಕನ್ನಡ ಸಿನಿಮಾ ಯಾವುದು’ ಎಂದು ಕೇಳುತ್ತಿದ್ದರು. ಹಾಗೆ ಕೇಳಿದಾಗಲೆಲ್ಲಾ ನಾನು ಸುಮ್ಮನೆ ನಗುತ್ತಿದ್ದೆ. ಸಿನಿಮಾ ಬರುತ್ತಿದೆ ಎಂದಷ್ಟೆ ಹೇಳುತ್ತಿದ್ದೆ. ಈಗ ಸಿನಿಮಾ ಘೋಷಣೆಯಾಗಿದೆ’’ ಎಂದು ಖುಷಿಯಿಂದ ಮಾತನಾಡಿದ್ದಾರೆ.

ಬಹುಭಾಷಾ ಸಿನಿಮಾಗಳಲ್ಲಿ ತೊಡಗಿಕೊಂಡಿರುವ ಅವರು, ಸದ್ಯ ತಮಗೆ ದೊರೆಯುತ್ತಿರುವ ಅವಕಾಶಗಳ ಬಗ್ಗೆ ಸಂತಸವನ್ನೂ ವ್ಯಕ್ತಪಡಿಸಿದ್ದಾರೆ.

ಕದಂಬರ ಆಳ್ವಿಕೆಯ ಕಾಲದಲ್ಲಿ ಹುಟ್ಟಿದ ದಂತಕಥೆಯ ಕಥಾಹಂದರ ಹೊಂದಿರುವ ‘ಕಾಂತಾರ’ ಪ್ರೀಕ್ವೆಲ್‌ನಲ್ಲಿ ಯುವರಾಣಿಯ ವೇಷದಲ್ಲಿ ರುಕ್ಮಿಣಿ ಕಾಣಿಸಿಕೊಂಡಿದ್ದಾರೆ. ಹಿಂದಿನ ಕಾಂತಾರ ಸಿನಿಮಾ ಯಶಸ್ಸನ್ನು ಮನದಲ್ಲಿಟ್ಟುಕೊಳ್ಳುವುದು ಈ ಸಿನಿಮಾ ಬಯಸುವ ಹೊಸತನ ನೀಡಲು ತಡೆಯಾಗಬಹುದು ಎನ್ನುವ ಕಾರಣಕ್ಕೆ ಜಾಗ್ರತೆಯಿಂದ ಪಾತ್ರ ನಿರ್ವಹಣೆ ಮಾಡಿರುವುದಾಗಿ ಹೇಳಿದ್ದಾರೆ. ‘ಹಿಂದಿನ ಸಿನಿಮಾಗೆ ಮ್ಯಾಚ್ ಆಗಲು ಪ್ರಯತ್ನಿಸುವ ಬದಲು ಸ್ವತಂತ್ರ ಕಥೆಯೆಂಬಂತೆ ಪರಿಗಣಿಸಿದ್ದೇನೆ’ ಎಂದಿದ್ದಾರೆ.



# ಹುರಿಯಾಳಾದ ಡಾಲಿ

‘ಹಲಗಲಿ’ ಸಿನಿಮಾದಲ್ಲಿ ಡಾಲಿ ಪಾತ್ರದ ಲುಕ್ ಈಚೆಗಷ್ಟೆ ಬಿಡುಗಡೆಯಾಗಿದ್ದು, ಅದರಲ್ಲಿ ಹುರಿಯಾಳಾಗಿ ಕಾಣಿಸಿಕೊಂಡಿದ್ದಾರೆ ಅವರು. ಧನಂಜಯ್ ಹಾಗೂ ಸಪ್ತಮಿ ಗೌಡ ನಟಿಸುತ್ತಿರುವ ‘ಹಲಗಲಿ’, ಐತಿಹಾಸಿಕ ಕಥಾಹಂದರದ ಸಿನಿಮಾ ಆಗಿದ್ದು, ಈಗಾಗಲೇ ಶೇ. 40ರಷ್ಟು ಚಿತ್ರೀಕರಣ ಮುಗಿದಿದೆ.

ಹೇಮಂತ್ ಎಂ. ರಾವ್ ನಿರ್ದೇಶನದ ‘666 ಆಪರೇಷನ್ ಡ್ರೀಮ್ ಥಿಯೇಟರ್’ ಘೋಷಣೆ ಬೆನ್ನಲ್ಲೇ ಡಾಲಿ ಅಭಿನಯದ ಈ ಸಿನಿಮಾ ಕೂಡ ಘೋಷಣೆಯಾಗಿದ್ದು, ಇದರಲ್ಲಿ ‘ಜಡಗ’ನಾಗಿ, ಭಿನ್ನವಾದ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಯುದ್ಧಕ್ಕೆ ಸನ್ನದ್ಧನಾದ ನಾಯಕನಂತೆ ತೋರುತ್ತಿದ್ದಾರೆ.

ಬ್ರಿಟಿಷರ ವಿರುದ್ಧ ಮೊದಲ ಗೆರಿಲ್ಲಾ ಯುದ್ಧ ಮಾಡಿದ ರಾಜ್ಯದ ಹಲಗಲಿ ಬೇಡರ ಕುರಿತ ಕಥೆ ಇದಾಗಿದ್ದು, ಈ ಕಥೆ ಧನಂಜಯ್ ಅವರಲ್ಲಿಯೂ ಕುತೂಹಲ ಉಂಟು ಮಾಡಿದೆ. ‘ಇತಿಹಾಸ ನನಗೆ ಎಂದಿಗೂ ಆಕರ್ಷಣೆಯ ವಿಷಯ. ಹಲಗಲಿ ನಮ್ಮ ನೆಲ, ನಮ್ಮ ಜನ ಹಾಗೂ ಅವರ ಶೌರ್ಯದ ಕಥೆ ಹೇಳುವ ಸಿನಿಮಾ. ಸ್ವಾತಂತ್ರ್ಯಕ್ಕಾಗಿ ಹೋರಾಡಿದ ವೀರನ ಪಾತ್ರ ಮಾಡುವುದು ಹೆಮ್ಮೆ ಕೂಡ’ ಎಂದು ಹೇಳಿಕೊಂಡಿದ್ದಾರೆ.

ಸುಕೇಶ್ ಡಿ.ಕೆ. ನಿರ್ದೇಶನ, ಕಲ್ಯಾಣ್ ಚಕ್ರವರ್ತಿ ಧೂಳಿಪಾಳ್ಯ ನಿರ್ಮಾಣದ ಈ ಚಿತ್ರ ಎರಡು ಭಾಗಗಳಲ್ಲಿ ಮೂಡಿಬರಲಿದ್ದು, ಕನ್ನಡ, ತೆಲುಗು, ತಮಿಳು, ಮಲೆಯಾಳಂ, ಹಿಂದಿ ಸಿನಿಮಾದಲ್ಲಿ ತೆರೆಕಾಣಲಿದೆ. ‘ಅಣ್ಣ ಫ್ರಂ ಮೆಕ್ಸಿಕೊ’, ‘ಉತ್ತರಕಾಂಡ’, ‘666 ಆಪರೇಷನ್ ಡ್ರೀಮ್ ಥಿಯೇಟರ್’, ‘ಜಿಂಗೊ’ ಸಿನಿಮಾಗಳಲ್ಲಿ ಡಾಲಿ ತೊಡಗಿಕೊಂಡಿದ್ದಾರೆ.